ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ.)**

ಕ್ರ.ಸಂ:ಬೆ.ವಿ.ಕಂ/ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಮಾಸಂಅ/ಬಿಸಿ-40/2022-2023/C4S-09

ಕಂಪನಿ ಕಾರ್ಯಾಲಯ,
ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ,
ಕ್ರೆಸೆಂಟ್ ಟವರ್ಸ್, ಕ್ರೆಸೆಂಟ್ ರೋಡ್,
ಮೊದಲನೇ ಮಹಡಿ, ರೇಸ್ ಕೋರ್ಸ್ ಹತ್ತಿರ,
ಬೆಂಗಳೂರು-560001.
ದೂ: 22267181/22356756
E-Mail ID: dgmhrd.work@gmail.com

ದಿನಾಂಕ: 07.05.2022

ಇವರಿಗೆ :

ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ವೃತ್ತ,
ಬೆ.ವಿ.ಕಂ. ಬೆಂಗಳೂರು ದಕ್ಷಿಣ ವೃತ್ತ/
ಕೋಲಾರ ವೃತ್ತ/ತುಮಕೂರು ವೃತ್ತ/ದಾವಣಗೆರೆ ವೃತ್ತ.

ಮಾನ್ಯರೆ,

**ವಿಷಯ :** MTTP-2 ರ ಅನ್ವಯ, **38** ನೇ ತಂಡದಲ್ಲಿ ಮಾಪಕ ಓದುಗ/ ಮೇಲ್ವಿಚಾರಕ/ ಅಪರೇಟರ್/ ಸಹಾಯಕ ಉಗ್ರಾಣ ಪಾಲಕ ಹುದ್ದೆಯಿಂದ ಕಿರಿಯ ಇಂಜಿನಿಯರು(ವಿ) ಹುದ್ದೆಗಾಗಿ ಬಡ್ತಿಪೂರ್ವ ತರಬೇತಿಯನ್ನು ಆಯೋಜಿಸುವ ಬಗ್ಗೆ.

**ಉಲ್ಲೇಖ:** 1. ಕ.ವಿ.ಪ್ರ.ನಿ.ನಿ. ಕಾರ್ಪೋರೇಟ್ ಕಚೇರಿ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ.74/5901/2007–08 ದಿನಾಂಕ 26.11.2007.

*****

ದಿನಾಂಕ **12.05.2022** ರಿಂದ **18.06.2022** ರವರೆಗೆ ಬೆ.ವಿ.ಕಂ. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಬೆಂಗಳೂರು ಇಲ್ಲಿ **38** ನೇ ತಂಡದ ಮಾಪಕ ಓದುಗ/ ಮೇಲ್ವಿಚಾರಕ/ ಅಪರೇಟರ್/ ಸಹಾಯಕ ಉಗ್ರಾಣ ಪಾಲಕ ಇವರಿಗೆ **30** ಕೆಲಸದ ದಿನಗಳ ಬಡ್ತಿ ಪೂರ್ವ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

ಮೇಲ್ಕಂಡ ತರಬೇತಿಗೆ ನಿಮ್ಮ ವೃತ್ತದಿಂದ ನಿಯೋಜಿಸಬೇಕಾದ ಮಾಪಕ ಓದುಗ/ ಮೇಲ್ವಿಚಾರಕ/ ಅಪರೇಟರ್/ ಸಹಾಯಕ ಉಗ್ರಾಣ ಪಾಲಕ ರವರುಗಳ ಸಂಖ್ಯೆಯನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ವೃತ್ತ | ನಿಯೋಜಿಸಬೇಕಾದ ಮಾಪಕ ಓದುಗ/ ಮೇಲ್ವಿಚಾರಕ/ ಅಪರೇಟರ್/ ಸಹಾಯಕ ಉಗ್ರಾಣ ಪಾಲಕ ರವರುಗಳ ಸಂಖ್ಯೆ | ಷರಾ |
|---|---|---|---|
| 1 | ಬೆಂಗಳೂರು ದಕ್ಷಿಣ/ಉತ್ತರ/ ಪೂರ್ವ/ ಪಶ್ಚಿಮ/ ಗ್ರಾಮಾಂತರ/ರಾಮನಗರ ವೃತ್ತಗಳು | 13 | – |
| 2 | ತುಮಕೂರು ವೃತ್ತ | 5 | – |
| 3 | ಕೋಲಾರ ವೃತ್ತ | 10 | – |
| 4 | ದಾವಣಗೆರೆ ವೃತ್ತ | 12 | – |
| | **ಒಟ್ಟು** | **40** | |

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು ದಿನಾಂಕ **12.05.2022 ರಂದು ಪೂರ್ವಾಹ್ನ 9:30** ಗಂಟೆಗೆ ಸರಿಯಾಗಿ **ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, 1ನೇ ಮಹಡಿ, ಕ್ರೇಸೆಂಟ್ ಟವರ್ಸ್, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಹತ್ತಿರ, ಬೆಂಗಳೂರು-560 001** ಇಲ್ಲಿಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ತರಬೇತಿಯು ವಸತಿ ರಹಿತವಾಗಿರುತ್ತದೆ. ತರಬೇತಿಗೆ ನಿಯೋಜಿಸಿದ ನೌಕರರು ನಿಗಮದ ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಅರ್ಹರಾಗಿರುತ್ತಾರೆ.

ತಮ್ಮ ವೃತ್ತದಿಂದ ತರಬೇತಿಗೆ ನಿಯೋಜಿಸಲ್ಪಟ್ಟ ಶಿಬಿರಾರ್ಥಿಗಳ ಜ್ಞಾಪನ ಪತ್ರದ ಪ್ರತಿಯನ್ನು ಈ ಕಚೇರಿಗೆ ತುರ್ತಾಗಿ ಕಳುಹಿಸಲು ಕೋರಲಾಗಿದೆ.

**ವಿಶೇಷ ಸೂಚನೆಗಳು:**

1. ಆರ್ & ಪಿ ರೆಗ್ಯೂಲೇಷನ್ ಅನ್ವಯ ವೃತ್ತವಾರು ಜ್ಯೇಷ್ಠತೆ ಆಧಾರದ ಮೇಲೆ ನೌಕರರನ್ನು ತರಬೇತಿಗೆ ನಿಯೋಜಿಸುವುದು. ನೌಕರರ ಜ್ಯೇಷ್ಠತೆಯನ್ನು ನಿರ್ಧರಿಸುವಲ್ಲಿ ಈ ಕಚೇರಿಯ ಪಾತ್ರ ಮತ್ತು ಜವಬ್ದಾರಿ ಇರುವುದಿಲ್ಲ.
2. ನಿಮ್ಮ ವೃತ್ತದಿಂದ ನಿಯೋಜಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಮೇಲೆ ನಿಗದಿ ಪಡಿಸಿದ ಸಂಖ್ಯೆಯನ್ನು ಮೀರಬಾರದು.
3. ದಿನಾಂಕ **12.05.2022** ನಂತರ ವರದಿಮಾಡಿಕೊಳ್ಳುವ ಅಭ್ಯರ್ಥಿಗಳನ್ನು ತರಬೇತಿಗೆ ಸೇರಿಸಿಕೊಳ್ಳಲಾಗುವುದಿಲ್ಲ.
4. ಸಂಬಂಧಿಸಿದ ಅಧಿಕಾರಿಗಳು ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರನ್ನು ತರಬೇತಿಗೆ ಹಾಜರಾಗಲು ಅನುಕೂಲವಾಗುವಂತೆ ಸಕಾಲದಲ್ಲಿ ಕಾರ್ಯಮುಕ್ತ (ರಿಲೀವ್) ಮಾಡುವುದು.
5. ನಿಯೋಜಿತ ನೌಕರರು ಎರಡು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರಗಳಲ್ಲಿ ಒಂದನ್ನು ಕಾರ್ಯಮುಕ್ತ ಪತ್ರದ (ರಿಲೀವ್ ರಿಪೋರ್ಟ್) ಬಲಭಾಗದಲ್ಲಿ ಅಂಟಿಸಿ ಕಚೇರಿ ಮುಖ್ಯಸ್ಥರ ಸಹಿ ಮತ್ತು ಮೊಹರುಗಳೊಂದಿಗೆ ತರಬೇತಿಗೆ ಹಾಜರಾಗುವ ಸಮಯದಲ್ಲಿ ಸಲ್ಲಿಸುವುದು.
6. ಅಭ್ಯರ್ಥಿಗಳು ತರಬೇತಿ ಪ್ರಾರಂಭವಾಗುವ ಮುನ್ನ 48 ಗಂಟೆಗಳ ಅಂತರದಲ್ಲಿ ಕೋವಿಡ್-19 **RT-PCR** ಅಥವಾ **Rapid Antigen Test (RAT)** ಪರೀಕ್ಷೆ ಮಾಡಿಸಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
7. ಅಭ್ಯರ್ಥಿಗಳು ತರಬೇತಿ ಪ್ರಾರಂಭವಾಗುವ ಮುನ್ನವೇ ಕೋವಿಡ್ **ಎರಡು ಡೋಸ್ ಲಸಿಕೆ** ಪಡೆದ ಪ್ರಮಾಣ ಪತ್ರವನ್ನು ಮಾ.ಸಂ.ಅ. ಕೇಂದ್ರಕ್ಕೆ ತರಬೇತಿಗೆ ಹಾಜರಾಗುವ ದಿನಾಂಕ ದಂದು ಕಡ್ಡಾಯವಾಗಿ ತರತಕ್ಕದ್ದು **(HARD COPY)**.
8. ತರಬೇತಿ ಸಮಯದಲ್ಲಿ ನೌಕರರು ಯಾವುದೇ ತರಹದ ರಜೆಗಳನ್ನು ಉಪಯೋಗಿಸುವಂತಿಲ್ಲ.
9. ಅಭ್ಯರ್ಥಿಗಳು ಅಗತ್ಯವಾದ ಮುಖಗವಸು(ಮಾಸ್ಕ್), ಸ್ಯಾನಿಟೈಸರ್ ಮತ್ತು ವೈಯಕ್ತಿಕವಾಗಿ ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ಕಡ್ಡಾಯವಾಗಿ ತರತಕ್ಕದ್ದು.
10. ಅಭ್ಯರ್ಥಿಗಳು ತರಬೇತಿ ಸಮಯದಲ್ಲಿ ಕಡ್ಡಾಯವಾಗಿ 6 ಅಡಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳತಕ್ಕದ್ದು.
11. ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಯಾವುದೇ ತರಹದ ಕೋವಿಡ್-19ರ ಲಕ್ಷಣಗಳಾದ ಶೀತ, ಕೆಮ್ಮು, ಜ್ವರ ಇತ್ಯಾದಿ ಕಂಡು ಬಂದಲ್ಲಿ ತಕ್ಷಣವೇ ತರಬೇತಿಯಿಂದ ಬಿಡುಗಡೆ ಮಾಡಲಾಗುವುದು.
12. ತರಬೇತಿ ಸಮಯದಲ್ಲಿ ಹಾಗೂ ಊಟದ ಸಮಯದಲ್ಲಿ ಅಭ್ಯರ್ಥಿಗಳು ಗುಂಪಾಗಿ ಸೇರುವುದು, ಚರ್ಚೆ ಮಾಡುವುದನ್ನು ನಿಷೇಧಿಸಲಾಗಿದೆ.
13. ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಕೋವಿಡ್-19 ಮಾರ್ಗಸೂಚಿಗಳನ್ನು ತಪ್ಪದೇ ಅನುಸರಿಸುವುದು.
14. ಮೇಲೆ ತಿಳಿಸಿರುವ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸದ ಅಭ್ಯರ್ಥಿಗಳನ್ನು ಕೂಡಲೇ ತರಬೇತಿಯಿಂದ ಬಿಡುಗಡೆಗೊಳಿಸಲಾಗುವುದು.
15. ಅಭ್ಯರ್ಥಿಗಳು ತರಬೇತಿ ಅವಧಿಯಲ್ಲಿ ಶಿಸ್ತು ಕ್ರಮವನ್ನು ಪಾಲಿಸುವುದು.

ತಮ್ಮ ವಿಶ್ವಾಸಿ,

(ಪ್ರಶಾಂತಕುಮಾರ್ ಎಸ್.ಬಿ., ಕ.ಆ.ಸೇ.)
**ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.),**
**ನಿಗಮ ಕಾರ್ಯಾಲಯ, ಬೆ.ವಿ.ಕಂ.,**
**ಬೆಂಗಳೂರು.**

**ಪ್ರತಿಗಳು:**

1. ಉಪ ಪ್ರಧಾನ ವ್ಯವಸ್ಥಾಪಕರು(ವಿ), ಮಾ.ಸಂ.ಅ ಕೇಂದ್ರ, ಬೆ.ವಿ.ಕಂ, ಬೆಂಗಳೂರು.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು (ವಿ), ಕಾ. ಮತ್ತು ಪಾ. ವಿಭಾಗ, ಬೆ.ವಿ.ಕಂ, ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು (ವಿ), ಕಾ. ಮತ್ತು ಪಾ. ಉಪವಿಭಾಗ, ಬೆ.ವಿ.ಕಂ, ಇವರ ಸೂಕ್ತ ಕ್ರಮಕ್ಕಾಗಿ.
4. ಮು.ಕ./ಕ.ಪ್ರ.